# ಒಂದು ಊರಿನಲ್ಲಿ

ಒಂದು ಊರಿನಲ್ಲಿ
ಇತ್ತು ಒಂದು ನಲ್ಲಿ
ಅದರ ಎದುರು
ಊರ ಜನರು
ಸರತಿ ಸಾಲಿನಲ್ಲಿ

ಹಿಡಿದುಕೊಂಡು ಬಿಂದಿಗೆ
ನಿಂತುಕೊಂಡ ಮಂದಿಗೆ
ಕಾಡುತ್ತಿದೆ
ಒಂದೆ ಪ್ರಶ್ನೆ
ನೀರು ಬರುವುದೆಂದಿಗೆ?

ಇಂದು ನೀರು ಬಂದರೆ
ಕೊಡವ ತುಂಬಿಕೊಂಡರೆ
ಬಳಸಬಹುದು
ಮೂರು ದಿನ
ಬರದಿದ್ದರೆ ತೊಂದರೆ

ಪುಟ್ಟ ಹುಡುಗ ಮುರಲಿ
ಮಂದಿರಕ್ಕೆ ತೆರಳಿ
ಬೇಡಿಕೊಂಡ
ದೇವರನ್ನು
ಇಂದು ನೀರು ಬರಲಿ

